**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯದಲ್ಲಿ, ಸಿದ್ದಾಪುರ**

**ಉಪಸ್ಥಿತರುಃ**

**ಶ್ರೀ ತಿಮ್ಮಯ್ಯ ಜಿ. ಬಿ.ಎ. ಎಲ್.ಎಲ್.ಬಿ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**

**ಸಿದ್ದಾಪುರ**

**ದಿನಾಂಕಃ 27 ನೇ ಜೂನ್ 2022 ನೇ ಇಸವಿ**

**ಅಸಲು ದಾವೆ ಸಂಖ್ಯೆಃ 16 / 2021**

**ವಾದಿಃ** **ಸುಬ್ರಾಯ ಗಂಗಾಧರ ಭಟ್ಟ**

(ಪ್ರತಿನಿಧಿಸುವವರು ಶ್ರೀ. ಎಂ.ಆರ್.ಪಿ ನ್ಯಾಯವಾದಿಗಳು)

**ವಿರುದ್ಧ**

**ಪ್ರತಿವಾದಿಯರುಃ** **ಶ್ರೀಮತಿ ಇಂದಿರಾ ಕೋಂ ವಿಶ್ವನಾಥ ಭಟ್ಟ ಮತ್ತು ಇತರರು**

(ಪ್ರತಿನಿಧಿಸುವವರು ಶ್ರೀ.ಹೆಚ್.ಕೆ.ಎ /ಎ ಆರ್ ಎನ್ ನ್ಯಾಯವಾದಿಗಳು)

**ಅರ್ಜಿದಾರಃ** **ಸುಬ್ರಾಯ ಗಂಗಾಧರ ಭಟ್ಟ**

**ವಿರುದ್ಧ**

**ಎದುರುದಾರಃ** **ಶ್ರೀಮತಿ ಇಂದಿರಾ ಕೋಂ ವಿಶ್ವನಾಥ ಭಟ್ಟ ಮತ್ತು ಇತರರು**

**:: ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ ::**

ವಾದಿಯು, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಲ್ಲಿಸಿ, ದಾವ ಷೆಡ್ಯೂಲ್ ಆಸ್ತಿಯನ್ನು 5 ನೇ ಪ್ರತಿವಾದಿಯು ಸದರಿ ದಾವೆಯು ಇತ್ಯರ್ಥವಾಗುವವರೆಗೂ ಮಾರಾಟ ಮತ್ತು

ಯಾವುದೇ ಸಾಲ ವಗೈರೆಗಾಗಿ ಅಡಮಾನ ಅಥವಾ ಆಧಾರ ಮಾಡದಂತೆ 5 ನೇ ಪ್ರತಿವಾದಿಯ ವಿರುದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸುವಂತೆ, ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವಾಗಲು ಪ್ರಾರ್ಥಿಸಿರುತ್ತಾರೆ.

2. **ಮಧ್ಯಂತರ ಅರ್ಜಿಯ ಷೆಡ್ಯೂಲ್‌ನಲ್ಲಿನ ಸ್ವತ್ತಿನ ವರ್ಣನೆಃ**

ಸಿದ್ದಾಪುರ ತಾಲೂಕು ಉಂಬಳೇಮನೆ ಹೋಬಳಿ ತ್ಯಾಗಲಿ ಹಿರೇಕೈ ಗ್ರಾಮದ ಸರ್ವೇ ನಂ **7/2** ಕ್ಷೇತ್ರ 1 ಎಕರೆ **03** ಗುಂಟೆ ತರಿ ಜಮೀನು ಆಕಾರ **7** ಎಕರೆ **03** ಇದಕ್ಕೆ ಚತುರ್ಗಡಿ ಬಾಂದುಕಲ್ಲುಗಳು ಈ ರೀತಿ ದಾವಾಸ್ತಿಯಾಗಿರುತ್ತದೆ .

( ಇನ್ನೂ ಮುಂದೆ ಸದರಿ ಈ ಮೇಲಿನ ಆಸ್ತಿಯನ್ನು ದಾವಾ ಸ್ವತ್ತು ಎಂದು ಕರೆಯಲ್ಪಟ್ಟಿದೆ )

3. **ವಾದಿಯು ಸದರಿ ಅರ್ಜಿಯೊಂದಿಗಿನ ಶಪಥ ಪತ್ರದಲ್ಲಿ ಪ್ರತಿಪಾದಿಸುವುದೇನೆಂದರೆ,**

ಸದರಿ ಅರ್ಜಿ ಮತ್ತು ಪ್ರಮಾಣ ಪತ್ರವನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದು, ಸದರಿ ಮಧ್ಯಂತರ ಅರ್ಜಿಯನ್ನು 5 ನೇ ಪ್ರತಿವಾದಿಯ ವಿರುದ್ದ, ದಾವೆಯ ಷೆಡ್ಯೂಲ್ ನಲ್ಲಿ ತೋರಿಸಿರುವ ಆಸ್ತಿಯ ಬಗ್ಗೆ ಮಾರಾಟ ಮಾಡದಂತೆ ಹಾಗೂ ಸಾಲಕ್ಕೆ ಆಧಾರ ಅಥವಾ ಅಡಮಾನ ಮಾಡದಂತೆ 5 ನೇ ಪ್ರತಿವಾದಿ ವಿರುದ್ಧ ಸದರಿ ದಾವೆ ಇತ್ಯರ್ಥವಾಗುವವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಗಾಗಿ ಪರಿಹಾರ ಸಲ್ಲಿಸಿರುತ್ತಾರೆ.

ಮುಂದುವರೆದು, ವಾದಿಯು ಹೇಳುವುದೇನೆಂದರೆ, ದಾವಾಸ್ತಿಯು ವಾದಿ ಹಾಗೂ **1** ರಿಂದ **4** ನೇ ಪ್ರತಿವಾದಿಯರ ಕುಟುಂಬದ ಶ್ರೀ ಗಂಗಾಧರ ಸುಬ್ರಾಯ ಭಟ್ಟ ಎಂಬುವರು ವಾದಿ ಹಾಗೂ **1** ರಿಂದ **4** ನೇ ಪ್ರತಿವಾದಿಯರ ಕುಟುಂಬದ ಮೂಲ ಪುರುಷನಿದ್ದು, ಸದ್ರಿಯವರಿಗೆ ವಾದಿ ಹಾಗೂ **4** ನೇ ಪ್ರತಿವಾದಿಯರಲ್ಲದೇ ಒಬ್ಬ ಶ್ರೀ ವಿಶ್ವನಾಥ ಗಂಗಾಧರ ಭಟ್ಟ ಎಂಬ ಇನ್ನೊಬ್ಬ ಮಗನಿದ್ದು, ಸದ್ರಿಯವನು ವಾದಿ ಹಾಗೂ **4** ನೇ ಪ್ರತಿವಾದಿಯರ ಖಾಸಾ ಸಹೋದರನಾಗಿರುತ್ತಾನೆ . ಸದ್ರಿ ವಿಶ್ವನಾಥ ಭಟ್ಟ ಎಂಬುವವರು ಸನ್ **2008-09** ರಲ್ಲಿ ಮರಣಪಟ್ಟಿದ್ದು ಸದ್ರಿಯವರಿಗೆ **1** ನೇ

ಪ್ರತಿವಾದಿಯ ಹೆಂಡತಿ ಇದ್ದು 2 ಹಾಗೂ 3 ನೇ ಪ್ರತಿಪಾದಿಯರು ಮಕ್ಕಳಿರುತ್ತಾರೆ . ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರ ಕುಟುಂಬದಲ್ಲಿ ದಿನಾಂಕ 15-03-1988 ರಂದು ಕುಟುಂಬದ ಮೂಲ ಪುರುಷನಾದ ಗಂಗಾಧರ ಭಟ್ಟ ಈತನ ಮೂರು ಜನ ಗಂಡು ಮಕ್ಕಳಾದ ವಾದಿ ,4 ನೇ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿಯ ಗಂಡ ಹಾಗೂ 2 , 3 ನೇ ಪ್ರತಿವಾದಿಯರ ತಂದೆಯೂ ಆದ ವಿಶ್ವನಾಥ ಭಟ್ಟ ಇವರೆಲ್ಲರೂ ಒಟ್ಟೂ ಕುಟುಂಬದ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಕುರಿತು ಯಾವತ್ತೋ ವಾಂಟಣಿ (ವಿಭಾಗ) ಆಗಿದ್ದು, ಆ ಪ್ರಕಾರ ಆಯಾ ಹಿಸ್ಸೆದಾರರು ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಂಡು ಪ್ರತ್ಯೇಕ ಕಬ್ಜಾ ಮಾಡಿ ಬಂದಿರುತ್ತಾರೆ . ಸದ್ರಿ ಕುಟುಂಬದಲ್ಲಾದ ವಾಂಟಣಿ (ವಿಭಾಗ) ಕುರಿತು ದಿಃ15-03-1988 ರಂದು ಹಿಸ್ಸೆಯ ನೆನಪಿನ ಟಿಪ್ಪಣೆ ಅಥವಾ ವಾಂಟಣಿ ಕರಾರು ಅಂತಾ ಲೇಖಿ ಸಹ ಆಗಿದ್ದು, ಅದಕ್ಕೆ ಕುಟುಂಬದ ಮೂಲ ಪುರುಷನಾದ ಗಂಗಾಧರ ಭಟ್ಟ ವಾದಿ ಹಾಗೂ 4 ನೇ ಪ್ರತಿವಾದಿಯರಲ್ಲದೇ ಪ್ರತಿವಾದಿ ನಂ 1 ನೇಯವಳ ಗಂಡ ಹಾಗೂ 2 ,3 ನೇ ಪ್ರತಿವಾದಿಯರ ತಂದೆಯೂ ಆದ ವಿಶ್ವನಾಥ ಭಟ್ಟ ಈತನೂ ಸಹ ಸಹಿ ಮಾಡಿರುತ್ತಾನೆ. ಅಲ್ಲದೇ ವಾಂಟಣಿ (ವಿಭಾಗ ಪತ್ರದ) ಕರಾರಿನ ಮಜಕೂರುಗಳು ಅಂದರೆ ಷರತ್ತುಗಳ ಪ್ರಕಾರ ನಡೆದುಕೊಳ್ಳಲು ವಾದಿ ಹಾಗೂ ಸದ್ರಿ ತಹನಾಮೆಗೆ ಸಹಿ ಮಾಡಿದ 4 ನೇ ಪ್ರತಿವಾದಿಯರಲ್ಲದೇ ಸದ್ರಿ ವಿಶ್ವನಾಥ ಭಟ್ಟನಿಗೂ ಸಹ ಬಂಧನಕಾರಿಯಾಗಿರುತ್ತದೆ ಹಾಗೂ ಆ ಪ್ರಕಾರ ನಡೆದುಕೊಳ್ಳಲು ದಿಃ 15-03-1988 ರ ವಾಂಟಣಿ (ವಿಭಾಗ ಪತ್ರದ) ಕರಾರು ಸದ್ರಿ ವಾಂಟಣಿ ಕರಾರಿಗೆ ಸಹಿ ಮಾಡಿದ ಪ್ರತಿಯೊಂದು ಹಿಸ್ಸೇದಾರರು ಜವಾಬ್ದಾರರಾಗಿರುತ್ತಾರೆ . ಪ್ರತಿವಾದಿ ನಂ 1 ರಿಂದ 3 ನೇಯವರು ಸದ್ರಿ ವಿಶ್ವನಾಥ ಭಟ್ಟನ ಹಯಾತಿಯ (ಮರಣದ) ನಂತರ ಮೃತನ ವಾರಸುದಾರರಿದ್ದು ದಿನಾಂಕ 15-03-1988 ರ ವಾಂಟಣಿ ಕರಾರಿನ ಕಾಣಿಸಿದ ಯಾವತ್ತೂ ಶರ್ತುಗಳು ಕೂಡಾ 1 ರಿಂದ 3 ನೇ ಪ್ರತಿವಾದಿಯರು ಜವಾಬ್ದಾರರಾಗಿರುತ್ತಾರೆ. ದಾವಾಸ್ತಿಯು ವಾದಿಯ ಹಿಸ್ಸೆಗೆ ಬಂದ ಆಸ್ತಿಯ ಪಶ್ಚಿಮಕ್ಕೆ ವಾದಿಯ ಹಕ್ಕಿಗೆ ಸೇರಿದ ಸರ್ವೆ ನಂ 7/1 ರ ಕ್ಷೇತ್ರ ಇರುತ್ತಿದ್ದು

ವಾದಿಯ ಆಸ್ತಿಗೆ ಹೊಂದಿಕೊಂಡಿರುತ್ತದೆ .

ಮುಂದುವರೆದು, ಸಂದರ್ಭ ಹೀಗಿರುವಾಗ **15-03-1988** ರ ವಾಂಟಣಿ ಕರಾರ ಹಿಸ್ಸೆಯ ಮೂಲಕ ಪಡೆದುಕೊಂಡ ಯಾವತ್ತೂ ಆಸ್ತಿಯನ್ನು ಆಯಾ ಹಿಸ್ಸೇದಾರರು ತಮ್ಮ ಪಾಲಿನ ಆಸ್ತಿಗಳನ್ನು ಮಾರಾಟ ಮಾಡತಕ್ಕದಲ್ಲವೆಂತಲೂ ಹಾಗೂ ನಮ್ಮ ಪೈಕಿ ಉಳಿದ ಹಿಸ್ಸೇದಾರರಿಗೆ ಆಗಿನ ಮಾರುಕಟ್ಟೆ ಕಿಮ್ಮತ್ತಿಗೆ ಕೊಡತಕ್ಕದೆಂತಲೂ ಎಂಬ ಶರತ್ತನ್ನು ಆ ವಾಂಟಣಿ (ವಿಭಾಗದ) ಕರಾರಿಗೆ ಸಹಿಮಾಡಿದ ವಾದಿ ಹಾಗೂ **4** ನೇ ಪ್ರತಿವಾದಿಗಳಲ್ಲದೇ ವಿಶ್ವನಾಥ ಭಟ್ಟ ಈತನೂ ಸಹ ಸ್ವ ಖುಷಿಯಿಂದ ಒಪ್ಪಿ ಕರಾರು ಮಾಡಿಕೊಂಡಿದ್ದಿರುತ್ತದೆ . ಷದ್ರಿ ಕರಾರ ಪ್ರಕಾರ ಷದ್ರಿ ವಾಂಟಣಿ (ವಿಭಾಗದ) ಕರಾರಿಗೆ ಸಹಿ ಮಾಡಿದ ಯಾವುದೇ ಹಿಸ್ಸೇದಾರನು ಕಾಯ್ದೆ ಯಂತೆ ಮಾರಾಟ ಮಾಡಲು ಬರಲಾರದು . ಷದ್ರಿ ವಾಂಟಣಿ ಕರಾರಿಗೆ ಸಹಿ ಮಾಡಿದ ವಾದಿ , 4 ನೇ ಪ್ರತಿವಾದಿ ಹಾಗೂ ವಿಶ್ವನಾಥ ಭಟ್ಟ ಈ ಯಾವತ್ತೂ ಹಿಸ್ಸೇಃದಾರರಿಗೆ ತಮ್ಮ ಹಿಸ್ಸೆಗೆ ಬಂದ ಆಸ್ತಿ ಮಾರಾಟ ಮಾಡುವ ಸಂದರ್ಭದಲ್ಲಿ ಉಳಿದ ಹಿಸ್ಸೇದಾರರಿಗೆ ಆ ಆಸ್ತಿ ಖರೀದಿ ಮಾಡುವ ಹಕ್ಕು ಕೂಡಾ ಪಾಪ್ರವಾಗಿರುತ್ತದೆ. ಷದ್ರಿ ಹಿಸ್ಸೇದಾರರ ಪೈಕಿ ಯಾವೊಬ್ಬನಿಗೆ ಹಿಸ್ಸೆಗೆ ಹೋದ ಆಸ್ತಿಯನ್ನು ಮಾರಾಟ ಮಾಡುವ ಸಂದರ್ಭ ಬಂದಲ್ಲಿ ದಿಃ**15-03-1988** ರ ವಾಂಟಣಿ ಕರಾರಿನ ಪ್ರಕಾರ ಉಳಿದ ಹಿಸ್ಸೇಃದಾರರಿಗೆ ಷದ್ರಿ ಆಸ್ತಿಯನ್ನು ಖರೀದಿ ಮಾಡುವ ಹಕ್ಕನ್ನು ಮೊಟಕುಗೊಳಿಸಲು ಬರಲಾರದು. ಹೀಗಿದ್ದಾಗ್ಯೂ ಸಹ **1** ರಿಂದ **3** ನೇ ಪ್ರತಿವಾದಿಯರು ಷದ್ರಿ ವಿಶ್ವನಾಥ ಭಟ್ಟ ಈತನ ಹಿಸ್ಸೆಗೆ ಹೋದಂತಹ ಆಸ್ತಿಯನ್ನು **5** ನೇ ಪ್ರತಿವಾದಿಗೆ ದಿಃ **17-02-2020** ರಂದು ಮಾರುಕಟ್ಟೆ ಬೆಲೆಗೆ ಅಂದರೆ ರೂ. **1,65,000/-** ಕ್ಕೆ ಖಂಡಿತ ಕ್ರಯಕ್ಕೆ ನೀಡಿದ್ದಾರಾಗಿ ವಾದಿಗೆ ತಿಳಿದು ಬಂದಿರುತ್ತದೆ . ಮಾರಾಟ ಮಾಡುವ ಪೂರ್ವದಲ್ಲಿ 1 ರಿಂದ **3** ನೇ ಪ್ರತಿವಾದಿಯರು ವಾದಿ ಹಾಗೂ **4** ನೇ ಪ್ರತಿವಾದಿಗೆ ಮಾರಾಟ ಮಾಡುವ ಸಂಗತಿಯನ್ನು ತಿಳಿಸಿದ್ದಾಗಲೀ ಇರುವುದಿಲ್ಲ . ಷದ್ರಿ ಮಾರುಕಟ್ಟೆ ಕಿಮ್ಮತ್ತು ರೂ **1,65,000/-** ಗೆ ವಾದಿಯೇ ದಿನಾಂಕ **15-03-1988** ರ ಕರಾರಿಗನುಗುಣವಾಗಿ ದಾವಾಸ್ತಿಯನ್ನು ಖಂಡಿತ ಕ್ರಯಕ್ಕೆ ಪಡೆಯಲು

ಸಿದ್ಧನಿದ್ದನಲ್ಲದೇ, ಈಗಲೂ ಸದ್ರಿ ದುಡ್ಡಿಗೆ ಖಂಡಿತ ಕ್ರಯಕ್ಕೆ ಪಡೆಯಲು ಸಿದ್ಧನಿದ್ದಾನೆ . **1 ರಿಂದ 3** ನೇ ಪ್ರತಿವಾದಿಯರು ವಾದಿ ಹಾಗೂ **4** ನೇ ಪ್ರತಿವಾದಿಯನ್ನು ಕೇಳದೇ ಸದ್ರಿ ವಿಶ್ವನಾಥ ಈತನ ಹಿಸ್ಸೆಗೆ ಹೋದ ದಾವಾಸ್ತಿಯನ್ನು ಮಾರಾಟ ಮಾಡಲು ವಿಭಾಗದ ಕರಾರಿನಂತೆ ಬರಲಾರದು ಹಾಗೂ ದಿಃ**17-02-2020** ರಂದು **1** ರಿಂದ **3** ನೇ ಪ್ರತಿವಾದಿಯರು **5** ನೇಪ್ರತಿವಾದಿಯ ಹೆಸರಿನಲ್ಲಿ ಮಾಡಿಕೊಟ್ಟಿದ್ದೆಂಬ ದಾವಾಸ್ತಿಯ ಖಂಡಿತ ಕ್ರಯದಸ್ತ ದಾಖಲೆಯು ಅಸಿಂಧು ಇದ್ದು ದಿಃ**15-03-1988** ವಾಂಟಣಿ ಕರಾರಿನಲ್ಲಿ ಕಾಣಿಸಿದ ದಾವಾಸ್ತಿ ಖರೀದಿ ಮಾಡುವಕುರಿತು ವಾದಿಯ ಹಕ್ಕಿಗೆ ಧಕ್ಕೆ ತಗಲುವಂತಾಗುತ್ತದೆ ಹಾಗೂ ದಿಃ **17-03-2020** ರಂದು **1** ರಿಂದ **3** ನೇ ಪ್ರತಿವಾದಿಯರು **5** ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಟ್ಟಿದೆಂಬ ದಾವಾಸ್ತಿಯ ಖಂಡಿತ ಕ್ರಯಪತ್ರ ಅಸಿಂಧು ಇರುತ್ತದೆ ಹಾಗೂ **5** ನೇ ಪ್ರತಿವಾದಿಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ .

ಮುಂದುವರೆದು, ಸಂದರ್ಭ ಹೀಗಿರುವಾಗ , **5** ನೇ ಪ್ರತಿವಾದಿಯು **2020** ನೇ ನವೆಂಬರ್ ತಿಂಗಳ ಕೊನೆಯ ವಾರದ ಸುಮಾರಿನಿಂದ ದಾವಾಸ್ತಿಯ ಕುರಿತು ಗಮನಿಸುತ್ತಿರುವ ಕುರಿತು ವಾದಿಯ ಗಮನಕ್ಕೆ ಬಂದಿದ್ದು ಈ ಬಗ್ಗೆ **5** ನೇ ಪ್ರತಿವಾದಿಗಾಗಲೀ ಅಥವಾ **1** ರಿಂದ **3** ನೇ ಪ್ರತಿವಾದಿಯರು ಸಮಂಜಸ ಉತ್ತರ ನೀಡದೇ ಇರುವುದರಿಂದ ಮತ್ತು **5** ನೇ ಪ್ರತಿವಾದಿಯು **2020** ನೇ ಇಸ್ವಿ ಡಿಸೆಂಬರ್ ತಿಂಗಳ **3** ನೇ ವಾರದ ಸುಮಾರಿನಲ್ಲಿ ದಾವಾಸ್ತಿ ತನ್ನ ಹಕ್ಕಿಗೆ ಸೇರಿದ್ದೆಂತಲೂ ಹಾಗೂ **1** ರಿಂದ **3** ನೇ ಪ್ರತಿವಾದಿಯಿಂದ ತಾನು ದಿಃ **17-02-2020** ರಂದು ಖಂಡಿತ ಕ್ರಯದ ಮೂಲಕ ಪಡೆದುಕೊಂಡಿದ್ದೇನಾಗಿ ಈ ಬಗ್ಗೆ ದಾಖಲೆಗಳನ್ನು ತೆಗದು ವಿಚಾರಿಸಿದಾಗ, 1 ರಿಂದ 3 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ದಾವಾಸ್ತಿಯನ್ನು ಕಾಯ್ದೆಗೆ ವಿರುದ್ಧವಾಗಿ ಅಸಿಂಧು ಇದ್ದು, ಸದ್ರಿ ದಾಖಲೆಯ ದಿನಾಂಕಃ 15-03-1988 ರ ವಾಂಟಣಿ ಕಾಯ್ದೆ ವ್ಯತಿರಿಕ್ತವಾಗಿರುತ್ತದ್ದಲ್ಲದೇ ಸದ್ರಿ ದಾಖಲೆಯ ಆಧಾರದಿಂದ **5** ನೇ ಪ್ರತಿವಾದಿಗೆ ಯಾವುದೇ ಹಕ್ಕು ಕಬ್ಜಾ ಇರುವುದಿಲ್ಲ . ಆದ್ದರಿಂದ ಪ್ರತಿವಾದಿಗಳ ಸದರಿ ಕೃತ್ಯವನ್ನು ಹತ್ತಿಕ್ಕಲು ಬೇರೆ

ದಾರಿ ಕಾಣದೇ ವಾದಿಯರು ಘನ ನ್ಯಾಯಾಲಯಕ್ಕೆ ಸದರಿ ದಾವೆಯನ್ನು ಸಲ್ಲಿಸಿ , ಸದರಿ ದಾವೆ ಚಾಲ್ತಿಯಲ್ಲಿದ್ದಾಗ 5 ನೇ ಪ್ರತಿವಾದಿಯು ಕ್ರಯ ಪತ್ರದ ದಾಖಲೆಯನ್ನು ಉಪಯೋಗಿಸಿಕೊಂಡು ದಾವಾ ಸ್ವತ್ತನ್ನು ಮಾರಾಟ ಅಥವಾ ಅಡಮಾನ ಮಾಡುವ ಸಾಧ್ಯತೆ ಇರುವುದರಿಂದ ವಾದಿಯು ಸದರಿ ಅರ್ಜಿಯನ್ನು ಸಲ್ಲಿಸಿ **5** ನೇ ಪ್ರತಿವಾದಿಯು ಸದರಿ ದಾವಾ ಆಸ್ತಿಯನ್ನು ಸದರಿ ದಾವೆ ಇತ್ಯರ್ಥವಾಗುವವರೆಗೂ ಮಾರಾಟ ಮಾಡದಂತೆ ಹಾಗೂ ಸದರಿ ಸ್ವತ್ತನ್ನು ಅಡಮಾನ ಮಾಡಿ ಸಾಲ ವಗೈರೆ ಪಡೆಯದಂತೆ ತಾತ್ಕಾಲಿಕ ನಿರ್ಬಂಧಕ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ .

4. ಸದರಿ ಅರ್ಜಿಗೆ ಪ್ರತಿಯಾಗಿ, **5** ನೇ ಪ್ರತಿವಾದಿ ಪರ ನ್ಯಾಯವಾದಿಗಳು ತಕರಾರನ್ನು ಸಲ್ಲಿಸಿ ಅರ್ಜಿಯಲ್ಲಿನ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು, **5** ನೇ ಪ್ರತಿವಾದಿಯು ಆರೋಪಿಸುವುದೇನೆಂದರೆ, ವಾದಿಯು ಸೃಷ್ಟಿತ ಮತ್ತು ಕಲ್ಪಿತ ವಿಷಯದೊಂದಿಗೆ ತನ್ನ ಪ್ರಮಾಣೀಕೃತ ಹೇಳಿಕೆಯನ್ನು ಸಲ್ಲಿಸಿದ್ದು, ದಾವಾ ಸ್ವತ್ತಿನಲ್ಲಿ ವಾದಿಗಳು ಯಾವತ್ತೂ ಸ್ವಾಧೀನಾನನುಭವದಲ್ಲಿ ಇರುವುದಿಲ್ಲ. ಮುಂದುವರೆದು ದಿನಾಂಕ **17-02-2020** ರಂದು ಈ ದಾವಾದ **1** ರಿಂದ **3** ನೇ ಪ್ರತಿವಾದಿಯರಿಂದ ರೂ **1,65,000/-** ಪಂಚರ ಸಮಕ್ಷಮ ಖಂಡಿತಕ್ರಯ ಕ್ಕೆ ಖರೀದಿ ಮಾಡಿದ ಸ್ವತ್ತಾಗಿದ್ದು ಆ ಕುರಿತು ಸಿದ್ದಾಪುರ ಉಪ ನೋಂದಣಾಧಿಕಾರಿಗಳು ಸದ್ರಿ ಕರಾರು ನೋಂದಣಿಯಾಗಿರುತ್ತದೆ . 5 ನೇ ಪ್ರತಿವಾದಿ ದಾವಾ ಸೊತ್ತನ್ನು ಖರೀದಿಸುವ ಕಾಲಕ್ಕೆ ಸದ್ರಿ ಸ್ವತ್ತು **1** ರಿಂದ **3** ನೇಯವನ ಹೆಸರಿಗೆ ದಾಖಲಿಸಿದ್ದನ್ನು ಪರೀಶೀಲಿಸಿದ್ದು ಮತ್ತು ಅ ಕುರಿತು ಎಂ ಆರ್ ನಂ **13/2013-14** ರ ಪ್ರಕಾರ ಖಾತೆ ಪಹಣಿ ದಾಖಲಾಗಿರುವುದನ್ನು ಪರೀಶೀಲಿಸಿ ದಾವಾಸ್ತಿಯನ್ನು ಖರೀದಿಸಿರುತ್ತಾಳೆ ವಿನಃ ಯಾವುದೇ ಕಾಯ್ದೆಗೆ ವಿರುದ್ಧವಾದ ಸ್ವತ್ತಾಗಿರುವುದಿಲ್ಲ . ಮತ್ತು **1** ರಿಂದ **3** ನೇ ಯವರಿಗೆ ಚೆಕ್ ಮೂಲಕ ಸಂದಾಯ ಮಾಡಿರುತ್ತೇನೆಂದು ಸದ್ರಿ ನೋಂದಾವಣೆ ಕಾಲಕ್ಕೆ ಸದ್ರಿ ಕ್ರಯದಿಂದ ದಾವಾಸ್ತಿ ಸೊತ್ತಿಗೆ ಯಾವುದೇ ರೀತಿಯಿಂದ ತಂಟೆ ತಕರಾರು ಅಡ್ಡಿ ಆತಂಕವಿರುವುದಿಲ್ಲ

ಹಾಗೇನಾದರೂ ಉಂಟಾದಲ್ಲಿ **1** ರಿಂದ **3** ನೇ ಪ್ರತಿವಾದಿಯರು ತಮ್ಮ ಸ್ವಂತ ಜವಾಬ್ದಾರಿಯಿಂದ ಹಾಗೂ ಖರ್ಚಿನಿಂದ ಬಗೆಹರಿಸಿಕೊಡುತ್ತೇವೆಂದು ಒಪ್ಪಿರುತ್ತಾರೆ . ಆದ್ದರಿಂದ, ವಾದಿಯು ಸಲ್ಲಿಸಿರುವ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿರುತ್ತಾರೆ.

5. ಸದರಿ ಈ ಮೇಲಿನ ಅರ್ಜಿ ಮತ್ತು ತಕರಾರಿನಲ್ಲಿನ ಅಂಶವನ್ನು ಗಮನಿಸಿದಾಗ ಸದರಿ ಮಧ್ಯಂತರ ಅರ್ಜಿಯನ್ನು ತೀರ್ಮಾನಿಸಲು, ಈ ನ್ಯಾಯಾಲಯಕ್ಕೆ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ವಾದಿಯು ಮೇಲ್ನೋಟಕ್ಕೆ ವ್ಯಾಜ್ಯ ಯೋಗ್ಯ ಪ್ರಕರಣ ಆಗಿರುತ್ತದೆ ಎಂದು ರುಜುವಾತುಪಡಿಸುತ್ತಾರೆಯೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ?
3. ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ತುಂಬಲಾರದ ನಷ್ಟ ಮತ್ತು ಕ್ಷತಿ ಉಂಟಾಗುವುದೆ?
4. ಏನು ಆದೇಶ?

6. ಉಭಯ ಪಕ್ಷಗಾರರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

7. ಸದರಿ ಮಧ್ಯಂತರ ಅರ್ಜಿ, ವಾದಪತ್ರ ಮತ್ತು ಇದಕ್ಕೆ ಪೂರಕವಾಗಿ ವಾದಿಯು ಹಾಜರುಪಡಿಸಿರುವ ದಾಖಲೆಗಳು ಹಾಗೂ ಇತರೆ ಸಂಗತಿಗಳನ್ನು ಪರಿಶೀಲಿಸಿ, ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ 1 ರಿಂದ 3: ಸಕರಾತ್ಮಕವಾಗಿ,

ಅಂಶ 4: ಅಂತಿಮ ಆದೇಶದಂತೆ, ಈ ಕೆಳಗಿನ

ಕಾರಣಗಳಿಗಾಗಿ,

:: **ಕಾ ರ ಣ ಗ ಳು** ::

8. **ಅಂಶ 1 ರಿಂದ 3:** ಸದರಿ ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆ ತಪ್ಪಿಸುವ ಸಲುವಾಗಿ, ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಸದರಿ ಮಧ್ಯಂತರ ಅರ್ಜಿಯಲ್ಲಿನ ಹಾಗೂ ಲಿಖಿತ ತಕರಾರಿನ ಅಂಶಗಳನ್ನು ಸದರಿ ಆದೇಶದ ಆರಂಭದಲ್ಲೇ ವಿವರಿಸಲ್ಪಟ್ಟಿರುವುದರಿಂದ, ಸದರಿ ಅರ್ಜಿಯಲ್ಲಿನ ಹಾಗೂ ತಕರಾರಿನಲ್ಲಿನ ಅಂಶಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ ಮತ್ತೊಮ್ಮೆ ಈ ಸಂದರ್ಭದಲ್ಲಿ ಸದರಿ ಅಂಶಗಳನ್ನು ಪುನರ್ ಪ್ರಸ್ತಾಪಿಸಿರುವುದಿಲ್ಲ.

9. ವಾದಿಯರು, ಸದರಿ ದಾವೆಯನ್ನು ಪ್ರತಿವಾದಿಗಳ ವಿರುದ್ಧ, ದಾವೆಯ ಷೆಡ್ಯೂಲ್ ನಲ್ಲಿ ತೋರಿಸಿರುವ ಆಸ್ತಿಯ ಬಗ್ಗೆ 1 ರಿಂದ 3 ನೇ ಪ್ರತಿವಾದಿಯರು 5 ನೇ ಪ್ರತಿವಾದಿಯ ಹೆಸರಿಗೆ ಮಾಡಿರುವ ದಿನಾಂಕ 17-02-2020 ರ ನೋಂದಾಯಿತ ಕ್ರಯ ಪತ್ರದ ದಾಖಲೆಯು ಅಸಿಂಧು ಎಂದು ಘೋಷಣೆ ಮಾಡಲು ಹಾಗೂ ಇತರೆ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ, ದಿವಾಣಿ ಪ್ರಕ್ರಿಯಾ ಸಂಹಿತೆ 39 ಕ್ರಮಾದೇಶ ನಿಯಮ 1 ಮತ್ತು 2 ರಂತೆ ಸದರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ದಾವಾ ಷೆಡ್ಯೂಲ್ ಆಸ್ತಿಯನ್ನು **5** ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಸದರಿ ದಾವೆ ಇತ್ಯರ್ಥವಾಗುವವರೆಗೂ ಮಾರಾಟ ಮಾಡದಂತೆ ಹಾಗೂ ಯಾವುದೇ ಆಧಾರ ಅಥವಾ ಅಡಮಾನ ಮಾಡಿ ಸಾಲ ವಗೈರೆ ಪಡೆಯದಂತೆ **5** ನೇ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸುವಂತೆ, ಆದೇಶವಾಗಲು ಪ್ರಾರ್ಥಿಸಿರುತ್ತಾರೆ. ಸದರಿ ಅರ್ಜಿಗೆ ಪ್ರತಿಯಾಗಿ **5** ನೇ ಪ್ರತಿವಾದಿಯು ಸದರಿ ಅರ್ಜಿಯಲ್ಲಿನ ಅಂಶಗಳನ್ನು ಅಲ್ಲಗಳೆದು ತಕರಾರನ್ನು ಸಲ್ಲಿಸಿರುತ್ತಾರೆ.

10. ವಾದಿಯು ಸದರಿ ಅರ್ಜಿಯಲ್ಲಿನ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ಅಂದರೆ, ಸದರಿ ದಾವೆಯು ಮೇಲ್ನೋಟಕ್ಕೆ ನಡೆಸಲು ಯೋಗ್ಯವಾಗಿದ್ದು, ಅದರೊಂದಿಗೆ ತನಗೆ ದಾವಾ ಸ್ವತ್ತಿನಲ್ಲಿ ಹಕ್ಕು, ಅಧಿಕಾರ ಇರುವ ಬಗ್ಗೆ, ದಾವಾ ಸ್ವತ್ತಿಗೆ ಸಂಬಂಧಿಸಿದ ವಾದಿ ಮತ್ತು ಅವರ ಕುಟುಂಬದವರು ಮಾಡಿಕೊಂಡ ನೊಂದಾಯಿತ ಪಾಲು ವಿಭಾಗ ಪತ್ರದ ದೃಢೀಕೃತ ದಾಖಲೆ ಮತ್ತು ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಂ. ಆರ್ . ನಂಬರಿನ ದೃಢೀಕೃತ ದಾಖಲೆ ಹಾಗೂ ದಾವಾ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಮಾಡಿಕೊಟ್ಟ ನೋಂದಾಯಿತ ಕ್ರಯಪತ್ರದ ನಕಲನ್ನು ಹಾಜರುಪಡಿಸಿ, ಸದರಿ ದಾವಾ ಸ್ವತ್ತು ಮೂಲತಃ ತನ್ನ ತಂದೆ ಗಂಗಾಧರ ಸುಬ್ರಾಯ ಭಟ್ಟ ಅವರು 1971 ರಲ್ಲಿ ಗಣೇಶ ರಾಮ ಎಂಬುವವರಿಂದ ಕ್ರಯಕ್ಕೆ ಪಡೆದ ಸ್ವತ್ತಾಗಿರುತ್ತದೆ ಎಂಬ ಬಗ್ಗೆ ಎಂ.ಆರ್.ವಹಿಯ ದಾಖಲೆಯನ್ನು ಹಾಜರುಪಡಿಸಿದ್ದು, ಅನಂತರ ಸದರಿ ಸ್ವತ್ತನ್ನು ವಾದಿಯ ತಂದೆ ಮತ್ತು ಅವರ ತಂದೆ ಸೇರಿದಂತೆ ಅವರ ಒಟ್ಟೂ ಕುಟುಂಬದ ಸದಸ್ಯರೆಲ್ಲರ ದಾವಾ ಸ್ವತ್ತು ಸೇರಿದಂತೆ ಒಟ್ಟೂ ಕುಟುಂಬದ ಸ್ವತ್ತುಗಳನ್ನು ದಿನಾಂಕ 15-03-1988 ರಲ್ಲಿ ವಿಭಾಗ ಮಾಡಿಕೊಂಡಿದ್ದು , ತಮ್ಮ ಕುಟುಂಬದ ಮಧ್ಯೆ ಆದ ನೋಂದಾಯಿತ ಪಾಲು ವಿಭಾಗದ ಪತ್ರವನ್ನು ಹಾಜರುಪಡಿಸಿ, ಸದರಿ ವಿಭಾಗ ಪತ್ರದ ಕರಾರಿನಂತೆ ದಾವಾ ಸ್ವತ್ತು ಸೇರಿದಂತೆ ಕುಟುಂಬದ ಹಿಸ್ಸೇದಾರರು ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಮಾರಾಟ ಮಾಡದಂತೆ , ಒಂದು ವೇಳೆ ಮಾರಾಟ ಮಾಡುವ ಸಂದರ್ಭದಲ್ಲಿ ಬೇರೆಯರಿಗೆ ಮಾರಾಟ ಮಾಡುವಂತಿಲ್ಲ . ಸದರಿ ಮಾರಾಟ ಮಾಡಬೇಕಾದ ಸ್ವತ್ತನ್ನು ಕುಟುಂಬದ ಇತರೇ ಸದಸ್ಯರೇ ಯೋಗ್ಯ ಮಾರಾಟದ ಬೆಲೆ ನೀಡಿ ಕ್ರಯ ಮಾಡಿಕೊಳ್ಳತಕ್ಕದ್ದು ಎಂಬ ಕರಾರು ಇದ್ದರೂ ಸಹ 1 ರಿಂದ 3 ನೇ ಪ್ರತಿವಾದಿಯರು ಕರಾರನ್ನು ಮೀರಿ ದಾವಾ ಸ್ವತ್ತನ್ನು 5 ನೇ ಪ್ರತಿವಾದಿಗೆ 2020 ರಲ್ಲಿ ಈ ಮೇಲೆ ಹೇಳಿದ ಕ್ರಯ ಪತ್ರದಂತೆ ಮಾರಾಟ ಮಾಡಿದ್ದು ಇದರೊಂದಿಗೆ 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಕುಟುಂಬದಲ್ಲಿನ ವಿಭಾಗ ಪತ್ರದಲ್ಲಾದ ಕರಾರನ್ನು ಮೀರಿ ಮಾಡಿದ್ದಾಗಿದ್ದು , ಸದರಿ ದಾವಾ ಸ್ವತ್ತಿನ ಕ್ರಯಪತ್ರವು ಶೂನ್ಯವಾಗಿದ್ದು ದಾವಾ ಸ್ವತ್ತಿನಲ್ಲಿ ತನಗೆ ಹಕ್ಕು ಅಧಿಕಾರ ಇದೆಯೆಂದು ವಾದಿಯರು

ಪ್ರತಿಪಾದಿಸಿರುತ್ತಾರೆ .

ಸದರಿ ವಾದಿಯರ ಈ ಮೇಲಿನ ಪ್ರತಿಪಾದನೆಗೆ ವಿರುದ್ಧವಾಗಿ 5 ನೇ ಪ್ರತಿವಾದಿಯು ದಾವಾ ಸ್ವತ್ತು ದಿನಾಂಕ 17-02-2020 ಕ್ರಯ ಪತ್ರದಂತೆ ತಾನು ಕಾನೂನು ಬದ್ಧ ಹಾಗೂ ಸಂಪೂರ್ಣ ಮಾಲೀಕತ್ವ ಸ್ವಾಧೀನವನ್ನು ಹೊಂದಿರುತ್ತೇನೆಂದು ಪ್ರತಿಪಾದಿಸುತ್ತಾ ಉಳಿದಂತೆ ಅರ್ಜಿಯಲ್ಲಿರುವ ಆರೋಪಿತ ಅಂಶಗಳನ್ನು ಔಪಚಾರಿಕವಾಗಿ ತಮ್ಮ ತಕರಾರನ್ನು ಸಲ್ಲಿಸಿ ಅಲ್ಲಗಳೆದಿರುತ್ತಾರೆ.

11. ವಾದಿಯರು ಹಾಜರುಪಡಿಸಿರುವ ದಾವಾ ಸ್ವತ್ತಿನ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ದಾವಾ ಸ್ವತ್ತು ಮೂಲತಃ 1971 ರಲ್ಲಿ ವಾದಿಯ ತಂದೆ ಕ್ರಯಕ್ಕೆ ಕೊಂಡ ಸ್ವತ್ತಾಗಿದ್ದು ಅನಂತರ ಸದರಿ ಸ್ವತ್ತನ್ನು ಒಟ್ಟೂ ಕುಟುಂಬದ ಸದಸ್ಯರು 1988 ರ ಪಾಲು ವಿಭಾಗ ಪತ್ರದಂತೆ ವಿಭಾಗವಾಗಿದ್ದು ಸದರಿ ವಿಭಾಗ ಪತ್ರದಲ್ಲಿ ಹಿಸ್ಸೇದಾರರು ತಮ್ಮ ಸ್ವತ್ತುಗಳನ್ನು ಮಾರಾಟ ಮಾಡುವ ಕಾಲಕ್ಕೆ ತಮ್ಮ ಹಿಸ್ಸೇಯ ಸ್ವತ್ತುಗಳನ್ನು ತಮ್ಮ ಕುಟುಂಬದ ಸದಸ್ಯರಿಗೇ ಮಾರಾಟ ಮಾಡಬೇಕೇಂದು ಕರಾರು ಆಗಿದ್ದು, ಅದರಂತೆ 1 ರಿಂದ 3 ನೇ ಪ್ರತಿವಾದಿಯರು ನಡೆದುಕೊಂಡಿರುವುದಿಲ್ಲ, ಎಂಬ ಪ್ರತಿಪಾದಿತ ಅಂಶವನ್ನು ಗಮನಿಸಬಹುದಾಗಿದೆ . ಇದರೊಂದಿಗೆ ಸದರಿ ಪ್ರತಿಪಾದನೆಯ ಅಂಶವು ಉಭಯ ಪಕ್ಷಗಾರರ ಸಾಕ್ಷ್ಯಗಳ ಸಂಪೂರ್ಣ ವಿಚಾರಣೆ ನಂತರವೇ ಕಂಡುಬರುವ ಅಂಶವಾಗಿರುತ್ತದೆ . ಆದರೆ, ಈ ಹಂತದಲ್ಲಿ ಸದರಿ ಪ್ರತಿಪಾದನೆಯ ಅಂಶವು ರುಜುವಾತಾಗಿರುತ್ತದೆ ಎಂದು ಮೇಲ್ನೋಲಟಕ್ಕೆ ಪರಿಗಣಿಸಲು ಸಾಧ್ಯವಾಗಿರುವುದಿಲ್ಲ. ಆದರೆ ವಾದಿಯ ಪ್ರತಿಪಾದನೆಯಂತೆ ಹಾಗೂ ಅವನ ಮೇಲಿನ ರುಜುವಾತಿನ ಭಾರದ ಅಂಶದಡಿಯಲ್ಲಿ ದಾವಾ ಸ್ವತ್ತು ಸದರಿ ದಾವೆಯ ವಿಷಯ ವಸ್ತುವಾಗಿರುತ್ತದೆ ಹಾಗೂ ಸದರಿ ಸ್ವತ್ತಿನ ಮೇಲೆ ಹಕ್ಕು ಮತ್ತು ಅಧಿಕಾರದ ಬಗ್ಗೆ ವಾದಿಯು ಇನ್ನೂ ರುಜುವಾತುಪಡಿಸಬೇಕಾದ ಅಂಶವಾಗಿರುತ್ತದೆ .

ಮುಂದುವರೆದು, 5 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಟ್ಟಿರುವ ಕ್ರಯಪತ್ರದ ದಾಖಲೆಯನ್ನು ವಾದಿಯು ಪ್ರಬಲವಾಗಿ ಪ್ರಶ್ನಿಸಿರುತ್ತಾರೆ . ಈ ಹಂತದಲ್ಲಿ ಅಂದರೆ ಸದರಿ

ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ದಾವಾ ಸ್ವತ್ತನ್ನು 5 ನೇ ಪ್ರತಿವಾದಿ ತನ್ನ ಹೆಸರಿಗೆ ಇರುವ ಕ್ರಯಪತ್ರದ ಆಧಾರದ ಮೇಲೆ ಬೇರೆಯವರಿಗೆ ಮಾರಾಟ ಮಾಡಿದಲ್ಲಿ , ಮತ್ತೊಂದು ವಾಜ್ಯಕ್ಕೆ ಅವಕಾಶ ನೀಡಿದಂತಾಗುತ್ತದೆ. ಆದ್ದರಿಂದ, ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ 5 ನೇ ಪ್ರತಿವಾದಿಯು ಸದರಿ ದಾವಾ ಸ್ವತ್ತಿನಲ್ಲಿ ವಾದಿಗೆ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದು ಪ್ರತಿವಾದಿಸಿ ಅಲ್ಲಗಳೆದಿರುವ ಅಂಶ ಬಗ್ಗೆ ಸಹ ನ್ಯಾಯಾಲಯಕ್ಕೆ ಸದರಿ ದಾವೆಯಲ್ಲಿನ ಸಂಪೂರ್ಣ ಸಾಕ್ಷ್ಯ ವಿಚಾರಣೆಯ ನಂತರ ಕಂಡುಬರುವ ಅಂಶವಾಗಿದ್ದು, ಆದರೆ ಈ ಹಂತದಲ್ಲಿ ವಾದಿಯು ಹಾಜರುಪಡಿಸಿರುವ ದಾಖಲೆಗಳಿಂದ ಹಾಗೂ ಸದರಿ ಅರ್ಜಿಯ ಪ್ರಮಾಣಪತ್ರದಲ್ಲಿನ ಪ್ರತಿಪಾದನೆಯೊಂದಿಗೆ ದಾವೆಯು ವಿಚಾರಣಾ ಯೋಗ್ಯವಾಗಿರುವ ಬಗ್ಗೆ ನ್ಯಾಯಾಲಯವು ಈ ಹಂತದಲ್ಲಿ ಪೂರ್ವಭಾವಿಸಬಹುದಾಗಿರುತ್ತದೆ.

12. ಈ ಮೇಲೆ ಚರ್ಚಿಸಿದಂತೆ, ವಾದಿಯ ದಾವೆಯು ಮೇಲ್ನೋಟದ ದಾಖಲೆಯ ಸಾಕ್ಷ್ಯಗಳೊಂದಿಗೆ ವಿಚಾರಣಾ ಯೋಗ್ಯವಾಗಿರುತ್ತದೆ ಎಂಬ ಅಂಶವು ಕಂಡುಬಂದಿರುವುದರಿಂದ, ಇದರೊಂದಿಗೆ ಸದರಿ ಅರ್ಜಿಯಲ್ಲಿ ಅನುಕೂಲತೆಯ ಒಲವು ವಾದಿಯರ ಪರ ಇದ್ದು, ಸದರಿ ಅರ್ಜಿಯನ್ನು ಪುರಸ್ಕರಿಸಿದಲ್ಲಿ, ಪ್ರತಿವಾದಿಯರಿಗೆ ಯಾವುದೇ ರೀತಿಯ ನಷ್ಟ ಅಥವಾ ಗಾಯ ಉಂಟಾಗದಿರುವುದನ್ನು ಸಹ ಗಮನಿಸಬಹುದಾಗಿದೆ. ಇದರೊಂದಿಗೆ ಈ ಮೇಲೆ ಚರ್ಚಿಸಿದ ಕಾರಣಗಳಿಂದಾಗಿ, ವಾದಿಯ ಪರ ಅನುಕೂಲತೆಯ ಒಲವು ಇರುವುದು ಕಂಡುಬರುತ್ತದೆ.

ಮುಂದುವರೆದು, ಒಂದು ವೇಳೆ ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ, ವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿ ಪ್ರತಿಪಾದಿಸಿರುವಂತೆ,ತನಗೆ ವಿಭಾಗದ ಕರಾರಿನಂತೆ ಅಧಿಕಾರವಿರುವ ಬಗ್ಗೆ ಇತ್ಯರ್ಥವಾಗುವ ಮುಂಚೆಯೇ ದಾವಾ ಸ್ವತ್ತು ಮಾರಾಟವಾದಲ್ಲಿ ತೊಂದರೆ ಉಂಟಾಗುವ ಸಾಧ್ಯತೆ ಇದ್ದು, ಸದರಿ ತೊಂದರೆಯಿಂದ ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇದ್ದು,

ಇದರೊಂದಿಗೆ ಮತ್ತೊಂದು ಕಾನೂನು ಪ್ರಕ್ರಿಯೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ, ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ವಾದಿಯರು ಮೇಲ್ನೋಟದ ಸಾಕ್ಷ್ಯಗಳೊಂದಿಗೆ, ಅರ್ಜಿಯಲ್ಲಿ ಪ್ರತಿಪಾದಿಸಿರುವ ಅಂಶಗಳನ್ನು ರುಜುವಾತುಪಡಿಸಿದ್ದು, ಅದರೊಂದಿಗೆ ಸದರಿ ಅರ್ಜಿಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ವಾದಿಯರು ಅರ್ಹರಿರುತ್ತಾರೆ ಎಂದು ಹಾಗೂ ಸದರಿ ಅರ್ಜಿಯು ಪುರಸ್ಕರಿಸಲು ಯೋಗ್ಯವಿರುತ್ತದೆ ಎಂದು ನ್ಯಾಯಾಲಯವು ನಿರ್ಣಯಿಸಿ, **ಅಂಶ 1 ಕ್ಕೆ ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

13. **ಅಂಶ 4ಃ** ಈ ಮೇಲಿನ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ

:: **ಆದೇಶ** ::

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ I ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XXXIX ನಿಯಮ I ರಡಿಯಲ್ಲಿನ ಅರ್ಜಿಯನ್ನು ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಮುಂದುವರೆದು, ದಾವ ಷೆಡ್ಯೂಲ್ ಆಸ್ತಿಯನ್ನು 5 ನೇ ಪ್ರತಿವಾದಿಯು ಸದರಿ ದಾವೆಯು ಇತ್ಯರ್ಥವಾಗುವವರೆಗೂ ಮಾರಾಟ ಮತ್ತು ಅಡಮಾನ ಮಾಡದಂತೆ 5 ನೇ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2022 ನೇ ಇಸವಿ ಜೂನ್ 27 ನೇ ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Sd/-

**ಸಿವಿಲ್ ನಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಿದ್ದಾಪುರ**